ದಿನಾಂಕ 25-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು: 1, 2, 4 ರಿಂದ 7 ಮತ್ತು 9 ರಿಂದ 11 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಡಿ.ಎಂ ವಕೀಲರಿಂದ:</u>**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಅವಿವಾಹಿತ. ನನಗೆ 3 ಜನ ಸಹೋದರರು ಮತ್ತು 5 ಜನ ಸಹೋದರಿಯರು ಇರುತ್ತಾರೆ. ನನ್ನ ಸಹೋದರರೆಲ್ಲರೂ ಅವರ ಜೀವನಕ್ಕಾಗಿ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಆಡೂರಿನಲ್ಲಿ ನಾನು ಒಬ್ಬನೇ ವಾಸವಿದ್ದೇನೆ. ನನ್ನ ಮತ್ತು ಸಹೋದರರ ಕುಟುಂಬಕ್ಕೆ 6 ಎಕರೆ 36 ಗುಂಟೆ ಜಮೀನುಗಳು ಇದ್ದು, ಅವುಗಳ ಸ ನಂ: 25, 68, 80 ಮತ್ತು 73 ಆಗಿರುತ್ತವೆ. ನನಗೆ ಸದರಿ ಜಮೀನುಗಳ ಚಕ್ಕುಬಂದಿಗಳು ಹೇಳಲು ಆಗುವುದಿಲ್ಲ. ನಾನು ವಾಸವಿರುವ ಮನೆಯು ಆಡೂರಿನ ಹೊಂಡದ ಸರ್ಕಲ್ ರಸ್ತೆಯ ಬಳಿ ಇರುತ್ತದೆ. ವಾದಿ ಮತ್ತು ಪ್ರತಿವಾದಿಗಳ ಮನೆಗಳು ಆಡೂರು ಗ್ರಾಮದ 4 ನೇ ವಾರ್ಡಿನಲ್ಲಿ ಇದ್ದು, ಅದು ಕಂಚಿನೆಗಳೂರು ರಸ್ತೆಯ ಹತ್ತಿರ ಬರುತ್ತವೆ. ನನ್ನ ಕುಟುಂಬದ ಜಮೀನುಗಳು ಮತ್ತು ವಾದಿ, ಪ್ರತಿವಾದಿಯರ ಗೋಣಗೇರ ಕುಟುಂಬದ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಂತೆ ಇರುವುದಿಲ್ಲ.

2. ನಾನು ನ್ಯಾಯಾಲಯದಲ್ಲಿ ಸಾಕ್ಷಿಯನ್ನು ನುಡಿಯಲು ಸಮನ್ಸ ಬಂದಿರುವುದಿಲ್ಲ. ಇಂದು ಸಾಕ್ಷ್ಯವನ್ನು ನುಡಿಯಲು ನಾನು ಪ್ರತ್ಯೇಕವಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಮೃತ್ಯು ಪತ್ರದ ಆಧಾರದ ಮೇಲೆ ನನ್ನ ಸಾಕ್ಷ್ಯವು ಅವಶ್ಯಕತೆ ಇರುವುದರಿಂದ ವಕೀಲರು ತಿಳಿಸಿದ ಮೇರೆಗೆ ನಾನು ಸಾಕ್ಷಿಯನ್ನು ನುಡಿಯಲು ಬಂದಿರುತ್ತೇನೆ. ನಾನು ಮತ್ತು ವಾದಿಯ ತಂದೆ ಒಂದೇ ವಾರಿಗೆಯ ವ್ಯಕ್ತಿಗಳಲ್ಲ ಎಂದರೆ ಸರಿ.

3. ಈ ದಾವೆಯನ್ನು ಯಾರು, ಯಾರ ವಿರುದ್ದ ಮತ್ತು ಯಾವುದರ ಕುರಿತಾಗಿ ಸಲ್ಲಿಸಿದ್ದಾರೆಂದು ಗೊತ್ತಿಲ್ಲ. ಈ ದಾವೆಯನ್ನು ಸ ನಂಃ 150/2 ಎ/1 ಪೈಕಿ ಉತ್ತರ ದಿಕ್ಕಿನ 2 ಎಕರೆ 2 ಗುಂಟೆಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ. ವೀರಪ್ಪ ಗೋಣಗೇರ ರವರು ದಿಃ 20-06-2010 ರಲ್ಲಿ ಮರಣ ಹೊಂದಿರುತ್ತಾರೆ. ಆತ ಮರಣ ಹೊಂದುವ ದಿನಾಂಕಕ್ಕೆ ಸುಮಾರು 80 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ಆತ ಮರಣ ಹೊಂದುವ ಸಮಯಕ್ಕೆ ಆತನಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿಗಳು ಕೇಳಿಸುತ್ತಿರಲಿಲ್ಲ ಮತ್ತು ವಯೋ ಸಹಜದಿಂದ ದೇಹವು ಕೃಷವಾಗಿತ್ತು ಎಂದರೆ ಸರಿಯಲ್ಲ. ಆತನಿಗೆ ವಯಸ್ಸು ಆಗಿದ್ದರಿಂದ ಮಾನಸಿಕವಾಗಿ ಅಸ್ವಸ್ಥರಾಗಿದ್ದರು ಮತ್ತು ನಡೆದಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

4. ಆತನು ಸದರಿ ಸಮಸ್ಯೆಗಳಿಂದ ಬಳಲುತ್ತಿದ್ದರಿಂದ ಒಬ್ಬ ವ್ಯಕ್ತಿಯ ಸಹಾಯ ಇಲ್ಲದೇ ಚಿಕಿತ್ಸೆಗಾಗಿ ಒಬ್ಬರೇ ಆಸ್ಪತ್ರೆಗೆ ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ವೀರಪ್ಪ ರವರಿಗೆ ಆರೋಗ್ಯ ಚೆನ್ನಾಗಿತ್ತು ಮತ್ತು ಸ್ವಸ್ಥತೆಯಿಂದ ಇದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನಿಗೆ ಕಣ್ಣುಗಳು ಕಾಣಿಸುತ್ತಿದ್ದವು ಮತ್ತು ಕಿವಿಗಳು ಕೇಳಿಸುತ್ತಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನಿಗೆ ಕಣ್ಣು ಕಾಣದೇ ಇದ್ದ ಕಾರಣಕ್ಕೆ ಶಿರಸಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ವಾದಿಯೇ ಸೇರಿಸಿ ಶಸ್ತ್ರ ಚಿಕಿತ್ಸೆ ಮಾಡಿಸಿದ್ದನು ಎಂದರೆ ಗೊತ್ತಿಲ್ಲ. ಆತನ ಕಣ್ಣಿಗೆ ಫಲಕಾರಿಯಾದ ಶಸ್ತ್ರ ಚಿಕಿತ್ಸೆ ಆಗದೇ ಇದ್ದ ಕಾರಣಕ್ಕೆ ಪದೇ ಪದೇ ಆತನನ್ನು ಹಾನಗಲ್ಲ ಮತ್ತು ಹಾವೇರಿಯ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಗೊತ್ತಿಲ್ಲ.

5. ಸ ನಂಃ 150/ಎ/1 ಸಂಪೂರ್ಣ ವಿಸ್ತೀರ್ಣ 4 ಎಕರೆ 2 ಗುಂಟೆ ಇತ್ತು. ಸದರಿ ಜಮೀನಿನ ಚಕ್ಕುಬಂದಿ ನನಗೆ ತಿಳಿದಿದ್ದು, ಪೂ-ಇದೇ ಸರ್ವೇ ನಂಬರಿನ ಉಳಿಕೆ ಜಮೀನು, ಪ- ಬಸವನಗೌಡ ಸುಂಕದ ರವರಿಗೆ ಸೇರಿದ ಸ ನಂಃ 151 ರ ಜಮೀನು, ಉ- ಸರಕಾರಿ ರಸ್ತೆ ಮತ್ತು ದ- ಗುಡ್ಡದ ಆಸ್ತಿಯಾದ ಸ ನಂಃ 142 ಇದೆ. ದಾವಾ

ಶೆಡ್ಯೂಲ್ ಆಸ್ತಿಯು ಆಡೂರು ಮತ್ತು ಕಂಚಿನೆಗಳೂರು ಮುಖ್ಯ ರಸ್ತೆಗೆ ಹೊಂದಿ ಕೊಂಡಂತೆ ಇದ್ದು ಮತ್ತು ಆಡೂರು ಗ್ರಾಮಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಮೃತ ವೀರಪ್ಪ ಗೋಣಗೇರ ರವರ ಮೂಲ ಊರು ಯಾವುದು ಎಂದು ನನಗೆ ಗೊತ್ತಿಲ್ಲ. ವೀರಪ್ಪ ಗೋಣಗೇರ ರವರು ತನ್ನ ಮೂಲ ಗ್ರಾಮದಲ್ಲಿ ಯಾವ ಯಾವ ಜಮೀನುಗಳು ಮತ್ತು ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ.

6. ದಾವಾ ಶೆಡ್ಯೂಲ್ ಆಸ್ತಿಯು ವೀರಪ್ಪ ಅವರಿಗೆ ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ ಎಂಬ ಸೂಚನೆಗೆ ಸಾಕ್ಷಿಯು ಆತ ಖರೀದಿ ಹಿಡಿದಿರುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಖರೀದಿಸಲು ವೀರಪ್ಪ ರವರಿಗೆ ಯಾವ ಆದಾಯದ ಮೂಲಗಳು ಮತ್ತು ಹಣವನ್ನು ಎಲ್ಲಿ ಹೊಂದಿಸಿದ್ದನು ಎಂದು ನನಗೆ ಗೊತ್ತಿಲ್ಲ. ಮೃತ ವೀರಪ್ಪ ರವರು ಸಾಯುವವರೆಗೂ ತನ್ನ ಒಟ್ಟು ಕುಟುಂಬದ ಜನರೊಂದಿಗೆ ವಾಸವಿದ್ದರು ಎಂದರೆ ಸಾಕ್ಷಿಯು ಮೊದಲಿಗೆ ಒಟ್ಟು ಕುಟುಂಬ ದಲ್ಲಿಯೇ ವಾಸವಿದ್ದು, ಕಳೆದ 15 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದರು ಎಂದು ನುಡಿಯುತ್ತಾರೆ. ವೀರಪ್ಪ ರವರು ಒಟ್ಟು ಕುಟುಂಬದಿಂದ ಪ್ರತ್ಯೇಕ ಆದ ನಂತರ ಸ್ವಲ್ಪ ದಿನಗಳ ಮಟ್ಟಿಗೆ ಆತನಿಗೆ ಇಷ್ಟ ಪಟ್ಟ ಮಕ್ಕಳೊಂದಿಗೆ ಆಗಾಗ್ಗೆ ವಾಸ ಮಾಡುತ್ತಿದ್ದನು. ವೀರಪ್ಪ ರವರು ಕುಟುಂಬದಿಂದ ಪ್ರತ್ಯೇಕವಾದ ನಂತರ ಸ್ವಲ್ಪ ದಿನಗಳ ಅವಧಿಗೆ ತನ್ನ ಎಲ್ಲಾ ಮಕ್ಕಳ ಮನೆಯಲ್ಲಿ ವಾಸವಿರುದ್ದನು ಎಂದು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೀರಪ್ಪ ರವರು ತನ್ನ ಮಕ್ಕಳೊಂದಿಗೆ ಎಂದಿಗೂ ವಿಭಾಗ ಆಗಿರಲಿಲ್ಲ ಎಂದರೆ ಸರಿಯಲ್ಲ.

7. ವೀರಪ್ಪ ರವರೇ ಮೃತ್ಯು ಪತ್ರವನ್ನು ಬರೆಯಬೇಕು ಎಂದು ನನ್ನನ್ನು ಖುದ್ದಾಗಿ ಹಾವೇರಿಯ ಉಪನೋಂದಾಣಾಧಿಕಾರಿಯ ಕಛೇರಿಗೆ ಕರೆದುಕೊಂಡು ಹೋಗಿದ್ದು, ಅವರು ತಾನು ಸತ್ತ ನಂತರ ಮೃತ್ಯು ಪತ್ರವನ್ನು ಬರೆದಿರುವ ಬಗ್ಗೆ ತಿಳಿಸಬೇಕೆಂದು ನನಗೆ ಹೇಳಿದ್ದರು. ವೀರಪ್ಪ ರವರು ನನ್ನ ಜೊತೆಗೆ ಅವರಿಗೆ ಪರಿಚಯವಿದ್ದ ಹಲವಾರು

ವ್ಯಕ್ತಿಗಳನ್ನು ಕರೆದುಕೊಂಡು ಬಂದಿದ್ದು, ಅವರ ಹೆಸರುಗಳು ನನಗೆ ಗೊತ್ತಿರುವುದಿಲ್ಲ. ಮೃತ್ಯು ಪತ್ರ ಬರೆಯುವ ಸಂದರ್ಭದಲ್ಲಿ ವೀರಪ್ಪ ರವರ ಕುಟುಂಬದ ಯಾವ ಸದಸ್ಯರು ಇರಲಿಲ್ಲ. ಮೃತ್ಯು ಪತ್ರ ಬರೆಸುವ ಉದ್ದೇಶಕ್ಕೆ ನಾನು ಆಡೂರಿನಿಂದ ಹಾವೇರಿಗೆ ಹೋಗಿರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ಕೆಲಸದ ನಿಮಿತ್ತ ಹಾವೇರಿಗೆ ಹೋಗಿದ್ದಾಗ ಅಚಾನಕ್ಕಾಗಿ ವೀರಪ್ಪ ಅವರಿಗೆ ನಾನು ಸಿಕ್ಕಿದ್ದು, ಅಲ್ಲಿಂದಲೇ ನನ್ನನ್ನು ಉಪ ನೋಂದಾವಣಾ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಮೃತ್ಯು ಪತ್ರ ನೋಂದಾಯಿಸುವ ದಿನಾಂಕದಂದು ಹಾವೇರಿಗೆ ನಾನು ನನ್ನ ತಾಯಿಗೆ ಮಾತ್ರೆಗಳನ್ನು ತರುವ ಉದ್ದೇಶಕ್ಕೆ ಹೋಗಿದ್ದೆ. ಮೃತ ವೀರಪ್ಪ ರವರು ಮೃತ್ಯು ಪತ್ರವನ್ನು ಬರೆಯುವ ದಿನಾಂಕದಂದು ನನಗೆ ಹಾವೇರಿಯ ಹುಕ್ಕೇರಿ ಮಠದ ಮಾರುಕಟ್ಟೆ ಹತ್ತಿರ ಸಿಕ್ಕಿರುತ್ತಾರೆ. ಅವರು ನನಗೆ ಸಿಕ್ಕಾಗ ಯಾವ ಸಮಯವಾಗಿತ್ತು ಎಂದು ನೆನಪಿಲ್ಲ. ಮಾರುಕಟ್ಟೆಯ ಬಳಿ ನನ್ನನ್ನು ವೀರಪ್ಪ ರವರು ಭೇಟಿ ಆದಾಗ ಅವರು ಒಬ್ಬರೇ ಇದ್ದರು. ಸದರಿ ಮಾರುಕಟ್ಟೆಯಿಂದ ನಾನು ಮತ್ತು ವೀರಪ್ಪ ರವರು ನೇರವಾಗಿ ಹಾವೇರಿಯ ಉಪನೋಂದಣಾಧಿಕಾರಿಗಳ ಕಚೇರಿಗೆ ಹೋಗಿರುತ್ತೇವೆ.

8. ನನ್ನ ಸಮಕ್ಷಮ ಮೃತ್ಯು ಪತ್ರವನ್ನು ಬರೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಹೋದಾಗ ಆಗಲೇ ಮೃತ್ಯು ಪತ್ರವನ್ನು ಬರೆದು ಇಟ್ಟಿದ್ದರು ಎಂದು ನುಡಿಯುತ್ತಾರೆ. ಮೃತ್ಯು ಪತ್ರವನ್ನು ಯಾರು ಮಾಹಿತಿ ನೀಡಿ ಬರೆಸಿರುತ್ತಾರೆ ಮತ್ತು ಯಾರು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಮೃತ್ಯು ಪತ್ರಕ್ಕೆ ಸಹಿ ಮಾಡುವಾಗ ನನ್ನ ಸಮಕ್ಷಮ ಯಾವ ವ್ಯಕ್ತಿಗಳು ಸಹಿ ಮಾಡಿರುತ್ತಾರೆ ಗೊತ್ತಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಯಾರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸಮಕ್ಷಮ ಸಹಿ ಮಾಡಿದ್ದು, ಆದರೆ ಅವರ ಪರಿಚಯ ನನಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸಹಿ ಮಾಡುವ ಸಮಯಕ್ಕೆ ಒಬ್ಬ ವ್ಯಕ್ತಿಯು ಮೃತ್ಯು ಪತ್ರಕ್ಕೆ ಸಹಿ ಮಾಡಿರುತ್ತಾನೆ. ನಾನು ಮತ್ತು ಇನ್ನೊಬ್ಬ ವ್ಯಕ್ತಿಯು ಉಪನೋಂದಣಾಧಿಕಾರಿಯ ಕಛೇರಿಯಲ್ಲಿ ಸಹಿ ಮಾಡಿರುತ್ತೇವೆ.

9. ಮೃತ್ಯು ಪತ್ರವನ್ನು ಬರೆಸುವುದಕ್ಕೆ ಸಲುವಾಗಿ ನಾನು ಒಂದು ಬಾರಿ ಮಾತ್ರ ಹಾವೇರಿಗೆ ಹೋಗಿರುತ್ತೇನೆ. ಮೃತ್ಯು ಪತ್ರದ ಸಂಬಂಧವಾಗಿ ಇತರ ವ್ಯಕ್ತಿಗಳು ಇದ್ದರು ಎಂದು ಹೇಳುವ ವ್ಯಕ್ತಿಗಳನ್ನು ಯಾರು ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ವೀರಪ್ಪ ರವರು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಸಮಕ್ಷಮವೇ ವೀರಪ್ಪ ಮೃತ್ಯು ಪತ್ರಕ್ಕೆ ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ವೀರಪ್ಪ ರವರು ತಮ್ಮ ಜೀವಿತಾವಧಿಯಲ್ಲಿ ದಾಖಲೆಗಳಿಗೆ ಸಹಿಗಳನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ.

10. ನಿ.ಪಿ-2 ರ ಮೃತ್ಯು ಪತ್ರದಲ್ಲಿ ಇರುವ ಒಕ್ಕಣೆಗಳನ್ನು ಯಾರು ಗಣಕೀಕೃತ ಗೊಳಿಸಿದ್ದರು ಮತ್ತು ಯಾರು ಹೆಬ್ಬೆಟ್ಟಿನ ಗುರುತುಗಳ ಪಕ್ಕದಲ್ಲಿ ಬರೆದಿರುವ ಅಕ್ಷರಗಳನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ-2 ರ ಮೃತ್ಯು ಪತ್ರದಲ್ಲಿ ಇರುವ ನನ್ನ ಸಹಿಯನ್ನು ಹೊರತುಪಡಿಸಿ ಇತರರ ಸಹಿಗಳು ಮತ್ತು ಹೆಬ್ಬೆಟ್ಟಿನ ಗುರುತನ್ನು ನನಗೆ ಯಾರದು ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ನಾನು ಹೇಳುತ್ತೇನೆ ಎಂದು ನುಡಿದು, ಹೆಬ್ಬೆಟ್ಟಿನ ಗುರುತುಗಳೆಲ್ಲವೂ ವೀರಪ್ಪ ರವರ ಹೆಬ್ಬೆಟ್ಟಿನ ಗುರುತುಗಳಾಗಿದ್ದು, ಅದರಲ್ಲಿ ಇರುವ ಉಳಿಕೆ ಸಹಿಗಳು ಯಾರಿಗೆ ಸಂಬಂಧಿಸಿದ ಸಹಿಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

11. ಮೃತ್ಯುಪತ್ರವನ್ನು ಬರೆಸುವ ಉದ್ದೇಶಕ್ಕೆ ಹಾವೇರಿಯ ಉಪನೋಂದಣಾ ಧಿಕಾರಿಗಳ ಕಛೇರಿಗೆ ಮಧ್ಯಾಹ್ನ 12.30 ರ ಸಮಯಕ್ಕೆ ಹೋಗಿದ್ದು, ನೋಂದಣಿ ಪ್ರಕ್ರಿಯೆಯು ಮುಗಿಯುವಷ್ಟರಲ್ಲಿ ಸಂಜೆ 5.00 ಗಂಟೆ ಸಮಯ ಆಗಿರುತ್ತದೆ. ನೋಂದಣಿ ಪ್ರಕ್ರಿಯೆಯು ಮುಗಿದ ನಂತರ ನೋಂದಾದ ಮೃತ್ಯು ಪತ್ರವನ್ನು ಮರುದಿನ ತೆಗೆದು ಕೊಳ್ಳುವುದಾಗಿ ನನಗೆ ತಿಳಿಸಿ ನನ್ನ ಜೊತೆಗೆ ಊರಿಗೆ ವಾಪಾಸು ಬಂದಿರುತ್ತಾರೆ. ಮರು ದಿನ ಮೃತ್ಯು ಪತ್ರವನ್ನು ವೀರಪ್ಪ ರವರು ತೆಗೆದುಕೊಂಡು ಬಂದ ನಂತರ ನನ್ನನ್ನು ಭೇಟಿ ಆಗಿರುತ್ತಾರೆ. ನಾನು ನನ್ನ ಮಕ್ಕಳನ್ನು ಶಾಲೆಗೆ ಬಿಡಲು ಹೋದಾಗ ಶಾಲೆಯ ಬಳಿ

ವೀರಪ್ಪ ರವರು ನನ್ನನ್ನು ಆಗಾಗ್ಗೆ ಭೇಟಿ ಮಾಡುತ್ತಿದ್ದರು ಮತ್ತು ಆ ಸಂದರ್ಭದಲ್ಲಿ ಅವರಿಗೆ ಯಾವುದೇ ವಸ್ತುಗಳು ಬೇಕಾದಾಗ ನನ್ನ ಮೂಲಕವೇ ತರಿಸಿಕೊಳ್ಳುತ್ತಿದ್ದರು. ಸದರಿ ಭೇಟಿಯ ಸಂದರ್ಭದಲ್ಲಿ ವೀರಪ್ಪ ರವರು ಉಪನೋಂದಣಾಧಿಕಾರಿಯ ಕಛೇರಿಯಲ್ಲಿ ನೋಂದಾಯಿಸಿದ ಮೃತ್ಯು ಪತ್ರವನ್ನು ನಾನು ತಂದಿದ್ದು ಅದನ್ನು ಮನೆಯಲ್ಲಿ ಇಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ.

12. ವೀರಪ್ಪ ರವರು ನನಗೆ ಹಾವೇರಿಯ ಮಾರುಕಟ್ಟೆಯ ಬಳಿ ಭೇಟಿ ಮಾಡಿ ಮೃತ್ಯು ಪತ್ರಕ್ಕೆ ಸಹಿ ಮಾಡಬೇಕೆಂದು ನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ನನ್ನ ಸಹಿಯನ್ನು ಮೃತ್ಯು ಪತ್ರಕ್ಕೆ ಮಾಡಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯು ಪತ್ರಕ್ಕೆ ವೀರಪ್ಪ ರವರು ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತಾರೆ ಮತ್ತು ನನಗೆ ಗೊತ್ತಿರದ ವ್ಯಕ್ತಿಗಳು ಸದರಿ ಮೃತ್ಯು ಪತ್ರಕ್ಕೆ ಸಹಿ ಮಾಡಿರುತ್ತಾರೆಂದು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾವೇರಿಯ ಬಸ್ ನಿಲ್ದಾದಲ್ಲಿ ಇಳಿದ ತಕ್ಷಣವೇ ಹಾನಗಲ್ಲಗೆ ಹೋಗುವ ರಸ್ತೆ ಮತ್ತು ಹುಬ್ಬಳ್ಳಿಗೆ ಹೋಗುವ ರಸ್ತೆಗಳಲ್ಲಿ ಇರುವ ಸರ್ಕಲ್ ನಲ್ಲಿ ಸಾಕಷ್ಟು ಔಷಧ ಸಿಗುವ ಅಂಗಡಿಗಳು ಇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸರ್ಕಲಿನಲ್ಲಿ ಔಷದ ಅಂಗಡಿಗಳು ಇದ್ದರು ಸಹ ನನ್ನ ತಾಯಿಗೆ ಬೇಕಾದ 25 ಎಂ.ಜಿ ಮಾತ್ರೆಯು ಸದರಿ ಔಷಧ ಅಂಗಡಿಗಳಲ್ಲಿ ಸಿಗದೇ ಇರುವ ಕಾರಣಕ್ಕೆ ನಾನು ಹಾವೇರಿಯ ಮನೋಹರ ಚಿತ್ರಮಂದಿರದ ಬಳಿ ಇರುವ ಔಷಧ ಅಂಗಡಿಯಲ್ಲಿ ಮೃತ್ಯು ಪತ್ರ ಬರೆಯುವ ದಿನಾಂಕದಂದು ಮಾತ್ರೆಗಳನ್ನು ತರಲುಹೋಗಿದ್ದೆ ಎಂದು ನುಡಿಯುತ್ತಾರೆ. ನಾನು ಹೇಳುವ ಮನೋಹರ ಸಿನಿಮಾ ಥಿಯೇಟರ್ ನ 500 ಮೀ ನ ಸುತ್ತಳತೆಯಲ್ಲಿ ಯಾವುದೇ ಔಷಧ ಅಂಗಡಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಯಾವುದಾದರೂ ಒಂದು ಔಷಧ ಅಂಗಡಿಯ ಹೆಸರನ್ನು ಹೇಳುವಂತೆ ವಕೀಲರು ಸೂಚಿಸಿದಾಗ ಸಾಕ್ಷಿಯು ನಾನು ಹೇಳುವಂತೆ ಅಲ್ಲಿ ಔಷಧಿ ಸಿಗುವ ಅಂಗಡಿಗಳು ಇದ್ದು, ಆದರೆ ಅಂಗಡಿಯ ಹೆಸರು ನೆನಪು ಇಲ್ಲ ಎಂದು ನುಡಿಯುತ್ತಾರೆ.

ದಿಃ 18-08-2009 ರಂದು ನಾನು ನನ್ನ ತಾಯಿಯ ಉಪಯೋಗಕ್ಕೆ ಮಾತ್ರೆಗಳನ್ನು ಖರೀಧಿಸಲು ಹಾವೇರಿಗೆ ಹೋಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ವಾದಿ ಮತ್ತು ನಾನು ಸಾಕಷ್ಟು ವರ್ಷಗಳಿಂದ ಪರಿಚಯ ಇರುತ್ತೇವೆ ಎಂದರೆ ಸರಿ. ನಾನು ವಾದಿ ನೀಡಿದ ಹಣದ ಆಮೀಷಕ್ಕೆ ಒಳಗಾಗಿ ನಿ.ಪಿ-2 ರ ಮೋಸದ ಮೃತ್ಯು ಪತ್ರವನ್ನು ಸೃಷ್ಟಿಸಲು ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಆತನೊಂದಿಗೆ ಮಿಲಾಪಿಯಾಗಿ ಖೊಟ್ಟಿ ಮೃತ್ಯು ಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

14. ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾವಿಬ್ಬರೂ ಸಾಕ್ಷಿದಾರರಿಗೆ ವೀರಪ್ಪ ರವರು ಮೃತ್ಯು ಪತ್ರವನ್ನು ಬರೆದಿಟ್ಟ ವಿಚಾರ ಮತ್ತು ಅದನ್ನು ಶಿವಕುಮಾರ ರವರಿಗೆ ನೀಡಿರುತ್ತೇವೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ಮಾಹಿತಿಯಂತೆ ವಕೀಲರು ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಂಗತಿಗಳನ್ನು ಬರೆಸಿರುತ್ತಾರೆ. ಮೃತ್ಯು ಪತ್ರವನ್ನು ಶಿವಕುಮಾರ ರವರಿಗೆ 10 ರಿಂದ 12 ವರ್ಷಗಳ ಹಿಂದೆ ಕೊಡಲಾಗಿತ್ತು. ಸದರಿ ಮೃತ್ಯು ಪತ್ರವು ವಾದಿ ಮತ್ತು ಪ್ರತಿವಾದಿಗಳ ಗೋಣಗೇರ ಕುಟುಂಬದ ಮನೆಯಲ್ಲಿ ಸಿಕ್ಕಿರುತ್ತದೆ. ಗೋಣಗೇರ ಕುಟುಂಬದ ಸುಮಾರು 5-6 ಮನೆಗಳು ಇದ್ದು, ಯಾರ ಮನೆಯಲ್ಲಿ ಮೃತ್ಯು ಪತ್ರ ಇತ್ತು ಎಂದು ನನಗೆ ಗೊತ್ತಿಲ್ಲ.

15. ದಾವಾ ಆಸ್ತಿಯನ್ನು ಹೊರತುಪಡಿಸಿ ಗೋಣಗೇರ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುತ್ತವೆ. ಬೇರೆ ಆಸ್ತಿಗಳ ಸರ್ವೇ ನಂಬರುಗಳು ನನಗೆ ಗೊತ್ತಿರುವುದಿಲ್ಲ ಮತ್ತು ಅವು ಹೇಗೆ ಬಂದಿರುತ್ತವೆ ಎಂದು ಗೊತ್ತಿರುವುದಿಲ್ಲ. ಗೋಣಗೇರ ಕುಟುಂಬದವರ ಸದಸ್ಯರಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವ ರೀತಿಯ ಭಿನ್ನಾಭಿಪ್ರಾಯ ಇದೆ ಎಂದು ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ಮನೆತನದ

ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವ ರೀತಿಯ ದಾವೆ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ದಾವೆಗಳನ್ನು ಯಾರು ಯಾರ ವಿರುದ್ದ ಯಾವ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ದಾವೆ ಬಾಕಿ ಇರುವ ಬಗ್ಗೆ ನಾನು ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ವಾದಿ, ಪ್ರತಿವಾದಿಗಳು ಯಾವಾಗ ಹಿಸ್ಸೇ ಮಾಡಿಕೊಂಡಿರುತ್ತಾರೆ ಮತ್ತು ಹಿಸ್ಸೇಯಲ್ಲಿ ಯಾವ ಯಾವ ಆಸ್ತಿಗಳು ಅವರ ಭಾಗಕ್ಕೆ ಹೋಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ಸಂಗತಿಗಳು ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಸೋಮಪ್ಪ ನೊಂದಿಗೆ ನಾನು ಮಿಲಾಪಿ ಆಗಿ ವೀರಪ್ಪ ರವರನ್ನು ಆಸ್ಪತ್ರೆಗೆ ಕರೆದುಕೊಂಡುಹೋಗಿ ಚಿಕಿತ್ಸೆಯನ್ನು ನೀಡಿಸುತ್ತೇವೆ ಎಂದು ಸುಳ್ಳು ಹೇಳಿ ಆತನನ್ನು ಉಪನೊಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ನಿ.ಪಿ-2 ರ ಮೋಸದ ಮೃತ್ಯು ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ಮೃತ್ಯು ಪತ್ರದ ಅಡಿಯಲ್ಲಿ ದಾವಾ ಆಸ್ತಿಯನ್ನು ವಾದಿಗೆ ದಕ್ಕಿಸಬೇಕು ಎಂಬ ಕಾರಣಕ್ಕೆ ಆತನ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವೀರಪ್ಪ ರವರು ತನ್ನ ಜೀವಿತಾ ಅವಧಿಯಲ್ಲಿ ಎಲ್ಲಾ ಮಕ್ಕಳೊಂದಿಗೆ ಪ್ರೀತಿ ಮತ್ತು ವಿಶ್ವಾಸದಿಂದ ಇದ್ದ ಎಂದರೆ ಸರಿ. ಅವನು ದಾವಾ ಆಸ್ತಿಯನ್ನು ಕೇವಲ ವಾದಿ ಮತ್ತು 8 ನೇ ಪ್ರತಿವಾದಿ ಇಬ್ಬರಿಗೆ ಮಾತ್ರ ಮೃತ್ಯು ಪತ್ರವನ್ನು ಬರೆದುಕೊಡುವ ಇಚ್ಚೆ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ ಸಂಗತಿಗಳ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 8 ನೇ ಪ್ರತಿವಾದಿಗಳ ಪರಃ**

ಸದರಿ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ